## ***ಶಾಸನ ಬದ್ದ ಸಭೆಗಳನ್ನು ನಡೆಸುವುದು***

### ***ತರಬೇತಿ ಮುಗಿದ ನಂತರ ಮೂರನೇ ವ್ಯಕ್ತಿಯ ಮೌಲ್ಯಮಾಪನ ಮೂಲಕ ಮತ್ತು ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಮೂಲಕ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿಯ ಅಧ್ಯಕ್ಷರುಗಳನ್ನು ಸಂಪರ್ಕಿಸಿದಾಗ ಕಂಡು ಬಂದಂತಹ ಬದಲಾವಣೆಗಳು***

ರಾಜ್ಯ ನಗರಾಬಿವೃದ್ಧಿ ಸಂಸ್ಥೆ ಕೆಎಂಆರ್‌ಪಿ ಯೋಜನೆಯಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿಯ ಅಧ್ಯಕ್ಷರುಗಳಿಗೆ ಶಾಸನ ಬದ್ದ ಸಭೆಗಳನ್ನು ನಡೆಸುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪಾತ್ರ ವಿಷಯವಾಗಿ ಮೂರು ದಿನಗಳ ತರಬೇತಿಯನ್ನು ಹಮ್ಮಿಕೊಂಡಿತ್ತು. ಈ ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಒಟ್ಟು 214 ನಗರ ಸ್ಥಳೀಯ ಸಂಸ್ಥೆಗಳ ಒಟ್ಟು 633 ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿಯ ಅಧ್ಯಕ್ಷರುಗಳನ್ನು ಗುರಿಯಾಗಿಟ್ಟು ಕೊಂಡು ನಡೆಸಲಾಯಿತು.

ಈ ತರಬೇತಿ ಕಾರ್ಯಕ್ರಮಗಳನ್ನು ಸಿದ್ದಾರ್ಥ ಹೋಟೆಲ್, ಮೈಸೂರು, ಎಐಐಎಲ್‌ಎಸ್‌ಜಿ, ಬೆಳಗಾವಿ, ಹೋಟೆಲ್ ಕಾಮತ್ ಯಾತ್ರಿ ನಿವಾಸ್, ಧಾರವಾಡ, ಬಿಜಾಪುರ ಮತ್ತು ಶಿವಮೊಗ್ಗ, ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ಹಾಗೂ ಸಹಾರ್ದರೂರಲ್ ಡೆವಲಪ್‌ಮೆಂಟ್, ಬೀದರ್ ನಲ್ಲಿ ನಡೆಸಲಾಯಿತು. ಕಾರ್ಯಕ್ರಮಕ್ಕೆ ಒಟ್ಟು 633 ಪ್ರಶಿಕ್ಷಣಾರ್ಥಿಗಳು ಹಾಜರಾಗಬೇಕಿದ್ದು, ಅದರಲ್ಲಿ 382 ಪ್ರಶಿಕ್ಷಣಾರ್ಥಿಗಳು ಹಾಜರಾಗಿದ್ದರು, ಶೇಕಡಾ 60 ರಷ್ಟು ಸಂಖ್ಯೆಯಲ್ಲಿ ಹಾಜರಾಗಿರುವುದು ಕಂಡುಬಂದಿದೆ.

**ಉದ್ದೇಶಗಳು:**

- ನಗರ ಸ್ಥಳೀಯ ಸಂಸ್ಥೆಯ ಸಭೆ, ನಡೆಸುವ ವಿಧಾನ, ಕೋರಂ ಮತ್ತು ನಡವಳಿಗಳ ಬಗ್ಗೆ ವಿವರಿಸುವಂತೆ ಮಾಡುವುದು ಹಾಗೂ ತಮ್ಮ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವಂತೆ ಪ್ರಯತ್ನಿಸುವುದು.
- ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಚುನಾಯಿತ ಪ್ರತಿನಿಧಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪಟ್ಟಿಮಾಡುವಂತಾಗಬೇಕು. ಆಡಳಿತದಲ್ಲಿ ತಮ್ಮಗಳ ಜವಾಬ್ದಾರಿಗಳನ್ನು ಅರ್ಥಮಾಡಿಕೊಂಡು ಅದರಂತೆ ವರ್ತಿಸುವಂತಾಗಬೇಕು.
- ಸ್ಥಾಯೀ ಸಮಿತಿಗಳ ಸಭೆ, ಸಭೆಯ ನಿಯಮಗಳು ಮತ್ತು ಕಾರ್ಯಗಳನ್ನು ವಿವರಿಸುವುದು ಮತ್ತು ಸಭೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುವಂತೆ ಪ್ರೇರೇಪಿಸುವುದು.

**ತರಬೇತಿಯಲ್ಲಿ ಅಳವಡಿಸಿದ ವಿಷಯಗಳು**

1. ತರಬೇತಿ ಕಾರ್ಯಕ್ರಮದ ಪರಿಚಯ
2. ಸಭೆಗಳು, ಸಭೆಗಳನ್ನು ನಡೆಸುವ ವಿಧಾನ ಮತ್ತು ರೀತಿ ನೀತಿಗಳು
3. ಮುನಿಸಿಪಾಲಿಟಿ ಅಧ್ಯಕ್ಷರ, ಉಪಾಧ್ಯಕ್ಷರ ಅಧಿಕಾರ, ಕರ್ತವ್ಯ, ಜವಾಬ್ದಾರಿಗಳು ಮತ್ತು ಮುಖಂಡತ್ವದ ಗುಣಲಕ್ಷಣಗಳು
4. ಸ್ಥಾಯೀ ಸಮಿತಿ, ರಚನೆ, ಸಭೆಗಳು, ಸ್ಥಾಯೀ ಸಮಿತಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

5. ಸಭೆಗಳನ್ನು ನಡೆಸುವ ವಿಧಾನದ ಪಾತ್ರಾಭಿನಯ
6. ಮುನಿಸಿಪಾಲಿಟಿ ಸಭೆಯ ಸಾಕ್ಷ್ಯ ಚಿತ್ರ ಪ್ರದರ್ಶನ ಮತ್ತು ಚರ್ಚೆ
7. ನೈತಿಕತೆ ಮತ್ತು ಘರ್ಷಣೆ (ಸಂಘರ್ಷ) ನಿರ್ವಹಿಸುವುದು
8. ಮುನಿಸಿಪಾಲಿಟಿ ಸಭೆಗಳು ಮತ್ತು ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳ ಆದೇಶಗಳು
9. ಮೌಲ್ಯಮಾಪನ ಮತ್ತು ಮುಕ್ತಾಯ

***ತರಬೇತಿ ಮುಗಿದ ನಂತರ ತರಬೇತಿಯ ಬಗ್ಗೆ ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯಗಳು ಮತ್ತು ಅನಿಸಿಕೆಗಳನ್ನು ಮೌಲ್ಯಮಾಪನದ ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಿದಾಗ ಕಂಡುಬಂದ ಅಂಶಗಳು***

1. ಕಾರ್ಯಕ್ರಮ ಉತ್ತಮ ರೀತಿಯಲ್ಲಿ ಹಾಗೂ ವ್ಯವಸ್ಥಿತ ರೀತಿಯಲ್ಲಿ ನಡೆಸಲಾಯಿತು.
2. ಸಭೆ ನಡೆಸುವ ವಿಧಾನ ತರಬೇತಿಗೆ ಮೊದಲು ಗೊತ್ತಿರಲಿಲ್ಲ. ಯಾವ ರೀತಿಯಲ್ಲಿ ಸಭೆಯನ್ನು ಶಾಸನಬದ್ಧವಾಗಿ ನಡೆಸಬಹುದೆಂಬುದನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಗಿದೆ.
3. ಮುನಿಸಿಪಾಲಿಟಿಯಲ್ಲಿನ ಕಾರ್ಯಚಟುವಟಿಕೆಗಳು ಏನು ಎಂಬ ಸಂಪೂರ್ಣ ಅರಿವಿರಲ್ಲಿ. ಈಗ ಅರಿವುಂಟಾಗಿದೆ.
4. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿ ಅಧ್ಯಕ್ಷರುಗಳ ಕರ್ತವ್ಯಗಳೇನು ಎಂಬು ಗೊತ್ತಿರಲಿಲ್ಲ ಆದ್ದರಿಂದ ನಮ್ಮ ವರ್ತನೆ ಬೇರೆ ರೀತಿಯಲ್ಲಿ ಇತ್ತು. ತರಬೇತಿಯಿಂದ ನಿಜವಾದ ನಮ್ಮ ಜವಾಬ್ದಾರಿಗಳು ಯಾವುವು ಎಂದು ತಿಳಿದುಕೊಳ್ಳಲು ಸಹಾಯಕವಾಗಿದೆ.
5. ಮುನಿಸಿಪಾಲಿಟಿ ಸಭೆ ನಡೆಯುವ ಸಂದರ್ಭದಲ್ಲಿ ಅಧ್ಯಕ್ಷರುಗಳ, ಉಪಾಧ್ಯಕ್ಷರುಗಳ ಮತ್ತು ಸ್ಥಾಯೀ ಸಮಿತಿ ಅಧ್ಯಕ್ಷರುಗಳ ಜವಾಬ್ದಾರಿಗಳು ಮತ್ತು ಕರ್ತವ್ಯಗಳನ್ನು ತಿಳಿಯಲು ಸಾಧ್ಯವಾಗಿದೆ.
6. ಮುನಿಸಿಪಾಲಿಟಿ ಸಭೆಗಳು ಮತ್ತು ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳ ಆದೇಶಗಳ ಬಗ್ಗೆ ತಿಳಿಯಲು ಸಾಧ್ಯವಾಗಿದೆ.
7. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉತ್ತಮ ನಾಯಕರಾಗಿ ಕೆಲಸ ನಿರ್ವಹಿಸಬೇಕಾದರೆ ಯಾವ ನಾಯಕತ್ವದ ಗುಣಲಕ್ಷಣಗಳನ್ನು ಹೊಂದಿರಬೇಕು ಹಾಗೂ ನೈತಿಕತೆ ಹೇಗಿರಬೇಕು ಮತ್ತು ಘರ್ಷಣೆ (ಸಂಘರ್ಷ) ನಿರ್ವಹಣೆ ಬಗ್ಗೆ ತಿಳಿಯಲು ಸಹಾಯವಾಗಿದೆ.
8. ನಮ್ಮಲ್ಲಿ ವೈಯಕ್ತಿಕವಾಗಿ ತುಂಬಾ ಸುಧಾರಣೆಯ ಅವಶ್ಯಕತೆಯಿದೆ ಎಂಬುದು ಮನದಟ್ಟಾಗಿದೆ. ಅದನ್ನು ಸರಿಪಡಿಸಿಕೊಳ್ಳುವ ತವಕ, ರಾಜಕೀಯದಲ್ಲಿ ಯಾವುದೇ ಒಂದು ಹುದ್ದೆಯನ್ನು ಕಾಪಾಡಿಕೊಳ್ಳಲು ಶಿಸ್ತು, ಸಂಯಮ ಮತ್ತು ಸಮಯ ಪ್ರಜ್ಞೆಯನ್ನು ಪಾಲಿಸಬೇಕೆಂದು ಈ ತರಬೇತಿಯ ಮೂಲಕ ಕಲಿತುಕೊಂಡೆವು.
9. ಈ ತರಹದ ತರಬೇತಿಗಳಲ್ಲಿ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ತಿಳಿಸಿರುವುದರಿಂದ ಅಧ್ಯಕ್ಷರಿಗೆ ಉತ್ತಮ ಆಡಳಿತ ನಡೆಸಲು ಅನುಕೂಲವಾಗಿದೆ.
10. ನಮ್ಮ ಆಡಳಿತದಲ್ಲಿ ತರಬಹುದಾದ ಬದಲಾವಣೆಗಳನ್ನು ಏನು ಎಂಬ ಅರಿವಾಗಿದೆ.
11. ತರಬೇತಿ ಸಮಯದಲ್ಲಿ ಕ್ಷೇತ್ರ ಅಧ್ಯಯನ ಮಾಡಿಸುವುದರಿಂದ ಅಲ್ಲಿನ ವ್ಯವಸ್ಥೆ, ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಎಲ್ಲಾ ಸದಸ್ಯರ ಕಾರ್ಯವೈಖರಿ, ಉತ್ತಮ ನಡವಳಿಗಳ ಬಗ್ಗೆ ತಿಳಿಯಲು ಇದು ತುಂಬಾ ಉತ್ತಮವಾಗಿತ್ತು.

12. ಮಹಿಳಾ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿ ಅಧ್ಯಕ್ಷರುಗಳಿಗೆ ಈ ತರಬೇತಿಗಳಿಂದ ಹೆಚ್ಚಿನ ಪ್ರಯೋಜನವಾಗಿದೆ. ನಾವು ಸಭೆ ನಡೆಸುವ ಸಂದರ್ಭದಲ್ಲಿ ಸದಸ್ಯರನ್ನು ನಿಯಂತ್ರಿಸುವುದು ಕಷ್ಟವಾಗಿತ್ತು. ಈ ತರಬೇತಿಯಿಂದ ನಾವು ಉತ್ತಮ ಸಭೆಗಳನ್ನು ನಡೆಸಬಲ್ಲೆವು ಎಂಬ ಮನೋಭಾವನೆ ನಮ್ಮಲ್ಲಿ ಮೂಡಿದೆ.
13. ಸಂದರ್ಭಕ್ಕೆ ತಕ್ಕಂತೆ ಹೇಗೆ ನಾವುಗಳು ಕಾರ್ಯಪ್ರವೃತ್ತರಾಗಬೇಕು, ಪರಸ್ಥಿತಿಯ ಒತ್ತಡಗಳನ್ನು ಹೇಗೆ ನಿಬಾಯಿಸಬೇಕು ಹಾಗೂ ಯಾರ ಮನಸ್ಸಿಗೂ ನೋವಾಗದಂತೆ ನಮ್ಮ ವರ್ತನೆಗಳನ್ನು ಹೇಗೆ ಬದಲಾಯಿಸಿಕೊಳ್ಳಬೇಕೆಂದು ಮನವರಿಕೆಯಾಗಿದೆ.
14. ನಾವು ಸ್ಥಳೀಯ ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವುದರಿಂದ ಹಾಗೂ ಸಮಾಜದ ಗಣ್ಯ ವ್ಯಕ್ತಿಗಳಾಗಿರುವುದರಿಂದ, ಸಾಧ್ಯವಾದಷ್ಟು ಯೋಚಿಸಿ, ದುಡುಕದೆ ಸಾರ್ವಜನಿಕರೊಂದಿಗೆ ವರ್ತಿಸಬೇಕು ಎಂಬುದು ತಿಳಿಯಿತು.
15. ಸಾಮಾಜಿಕ ಕಳಕಳಿ, ಕಾನೂನಿನ ಅರಿವು ತಿಳಿಯಲು ಬಹಳ ಸಹಕಾರಿಯಾಗಿದೆ. ಅದರಲ್ಲೂ ಮುನಿಸಿಪಾಲಿಟಿ ಆಕ್ಟ್ 1964 ಅನುಗುಣನವಾಗಿ ಕಾರ್ಯವೈಖರಿ ಗೊತ್ತಾಗಿದೆ.
16. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿ ಅಧ್ಯಕ್ಷರುಗಳು ಯಾವ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಹಾಗೂ ಅಧಿಕಾರಿಗಳ ವರ್ತನೆ ಯಾವ ರೀತಿಯಲ್ಲಿದೆ ಎಂಬ ವಿವರಗಳನ್ನೊಳಗೊಂಡ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯು ತಯಾರಿಸಿರುವ ಸಾಕ್ಷ್ಯ ಚಿತ್ರಗಳು ಉತ್ತಮ ಮಾಹಿತಿಯನ್ನು ಒಳಗೊಂಡಿದ್ದು ಅವುಗಳಿಂದ ಸಾಕಷ್ಟು ಮಾಹಿತಿಯನ್ನು ತಿಳಿಯಲು ಸಾಧ್ಯವಾಗುತ್ತದೆ.
17. ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಮೂಲಕ ತಯಾರಿಸಲಾದ ತರಬೇತಿಯ ಓದುವ ಸಾಮಗ್ರಿಗಳು ಹೆಚ್ಚು ಉಪಯುಕ್ತವಾಗಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

***ಮೂರನೇ ವ್ಯಕ್ತಿಯ ಮೂಲಕ ಮೌಲ್ಯಮಾಪನ ಕೈಗೊಂಡಾಗ ಮತ್ತು ಸಂಸ್ಥೆಯ ಮೂಲಕ ಆಯ್ದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿಗಳ ಅಧ್ಯಕ್ಷರನ್ನು ಸಂಪರ್ಕಿಸಿದಾಗ ಅವರಿಂದ ವ್ಯಕ್ತವಾದ ಅನುಭವಗಳು, ಅನಿಸಿಕೆಗಳು ಮತ್ತು ತರಬೇತಿಯ ಮೂಲಕ ಕಾರ್ಯಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳು***

1. ಸಭೆಯನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಿದ್ದಾರೆ. ಸಭೆಯಲ್ಲಿ ಶಿಸ್ತು ಸಂಯಮ ರೂಡಿಸಿಕೊಂಡಿದ್ದೇವೆ.
2. ಪ್ರತಿ ತಿಂಗಳಿಗೊಮ್ಮೆ ಸಭೆಯನ್ನು ನಡಸಲಾಗುತ್ತಿದೆ. ಸದಸ್ಯರ ಹಾಜರಾತಿಯನ್ನು ಕಡ್ಡಾಯ ಮಾಡಿರುತ್ತೇವೆ.
3. ಅಜೆಂಡಾ ತಯಾರಿ ಮಾಡುವುದು ಮತ್ತು ಸಭೆಯಲ್ಲಿ ಮಂಡನೆ ಮಾಡುವಲ್ಲಿ ಬದಲಾವಣೆಯಾಗಿದೆ.
4. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿಗಳ ಅಧ್ಯಕ್ಷರು ಸಭೆ ನಡೆಸುವ ಸಂದರ್ಭದಲ್ಲಿ ವ್ಯಯಕ್ತಿಕವಾಗಿ ಬದಲಾವಣೆಯನ್ನು ಮಾಡಿಕೊಂಡಿರುತ್ತೆವೆ ಎಂದು ತಿಳಿಸಿರುತ್ತಾರೆ.
5. ಸಭೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸ್ಥಾಯೀ ಸಮಿತಿಗಳ ಅಧ್ಯಕ್ಷರುಗಳನ್ನು ಸಂಬೋಧನೆ ಮಾಡುವ ವಿಧಾನದಲ್ಲಿ ಬದಲಾವಣೆಯಾಗಿದೆ.
6. ಸದಸ್ಯರುಗಳನ್ನು ಸಭೆಯಲ್ಲಿ ಯಾವ ರೀತಿಯಲ್ಲಿ ಸೌಜನ್ಯದಿಂದ ನಡೆಸಿಕೊಳ್ಳಬೇಕು ಮತ್ತು ದಕ್ಷ ರೀತಿಯಲ್ಲಿ ಹೇಗೆ ಸಭೆಯಲ್ಲಿ ವರ್ತಿಸಬೇಕು ಎಂಬಲ್ಲಿ ಸುಧಾರಣೆಯಾಗಿದೆ.

7. ಸದಸ್ಯರುಗಳಿಗೆ ಪ್ರಶ್ನೆಗಳನ್ನು ಕೇಳವ ಸಮಯಯಲ್ಲಿ ಬದಲಾವಣೆ ಮಾಡಲಾಗಿದೆ ಮತ್ತು ಅವರಿಗೆ ಆ ಮೂಲಕ ಸಮಯ ವ್ಯರ್ಥಮಾಡುವುದನ್ನು ನಿಯಂತ್ರಿಸಲಾಗಿದೆ.
8. ಅಧಿಕಾರಿಗಳೊಂದಿಗೆ ಯಾವ ರೀತಿ ಸೌಜನ್ಯದಲ್ಲಿ ವರ್ತಿಸಬೇಕೆಂಬುದನ್ನು ಅರ್ಥೈಸಿಕೊಂಡಿದ್ದೇವೆ.
9. ಕಾನೂನನ್ನು ಸಧ್ಯವಾದಷ್ಟು ಮಟ್ಟಿಗೆ ಸರಿಯಾಗಿ ಪಾಲಿಸುತ್ತಿದ್ದೇವೆ.
10. ಮುನಿಸಿಪಾಲಿಟಿ ಆಕ್ಟ್‌ನಲ್ಲಿ ನಮಗೆ ಅಗತ್ಯವಾದ ವಿಷಯಗಳನ್ನು ತಿಳಿದುಕೊಂಡಿದ್ದೇವೆ ಮತ್ತು ಅದರಂತೆ ಕಾರ್ಯನಿರ್ವಹಿಸಲು ಪ್ರಯತ್ನಿಸುತ್ತಿದ್ದೇವೆ.
11. ನಾಯಕತ್ವದ ಗುಣಲಕ್ಷಣಗಳನ್ನು ಅಳವಡಿಸಿಕೊಂಡಿದ್ದೇವೆ. ಪರಿಸ್ಥಿತಿಯನ್ನು ನಿಬಾಯಿಸುವ ಚಾಕಚಕ್ಯತೆ ಬಂದಿದೆ.
12. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಜವಾಬ್ದಾರಿಗಳೇನು, ಕರ್ತವ್ಯಗಳು ಮಾಡಬೇಕಾದ ಕೆಲಸಗಳು ಯಾವುವು ಎಂಬ ಅರಿವಾಗಿದೆ ಮತ್ತು ಅದರಂತೆ ಕಾರ್ಯ ನಿರ್ವಹಿಸಲು ಪ್ರಯತ್ನಿಸುತ್ತಿದ್ದೇವೆ.
13. ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ತರಬೇತಿ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅವರಿಂದ ಸಾಧ್ಯವಾದ ಎಲ್ಲಾ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.
14. ಸರ್ಕಾರಕ್ಕೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಕೆಲವು ಸುಧಾರಣೆಗಳನ್ನು ತರಬೇಕೆಂದು ಪೌರಾಡಳಿತ ನಿರ್ದೇಶನಾಲಯಕ್ಕೆ ನೇರವಾಗಿ ಮತ್ತು ಸಂಸ್ಥೆಯ ಮೂಲಕ ಒತ್ತಡ ಏರುತ್ತಿದ್ದೇವೆ. ಹಾಗೆಯೇ ಸರ್ಕಾರಕ್ಕೆ ನಗರ ಸ್ಥಳೀಯ ಸಂಸ್ಥೆಯ ಮೂಲಕ ಪ್ರಸ್ತಾವನೆಗಳನ್ನು ಹೀಗಾಗಲೇ ಕಳುಹಿಸಿರುತ್ತೇವೆ.
15. ತರಬೇತಿಯ ಕಲಿತ ಅಂಶಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವಂತೆ ಕ್ರಮ ವಹಿಸಲು ಪೌರಾಡಳಿತ ಸಚಿವರೊಂದಿಗೆ ನಿರಂತರ ಸಂಪರ್ಕಿಸಲಾಗುತ್ತಿದೆ ಹಾಗೂ ಸಾಧ್ಯವಾದಷ್ಟು ಒತ್ತಡ ಏರಲಾಗುತ್ತಿದೆ.
16. ರಾಜ್ಯ ನಗರಾಭಿವೃದ್ಧಿ ಸಂಸ್ಥೆಯು ಸರ್ಕಾರದ ಮಧ್ಯೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುವಂತೆ ಸಂಸ್ಥೆಯನ್ನು ಈಗಾಗಲೇ ಕೋರಿರುತ್ತೇವೆ.

**********